- ವಸ್ತು–ವೈವಿಧ್ಯತೆಗಳಿಂದ ಕೂಡಿದ ಈ ಸಂಚಿಕೆಯ ಎಲ್ಲಾ ಕತೆಗಳು ಗಮನ ಸೆಳೆದವು. ಆಕರ್ಷಕ ಶೈಲಿ, ಕುತೂಹಲ ಕೆರಳಿಸುವ ನಿರೂಪಣೆ ಈ ಬಾರಿಯ ಕತೆಗಳದು.

**ಲಕ್ಷ್ಮಿ ಪೂಜಾರಿ, ವಿಜಯಪುರ**

- ಜಿ.ವಿ. ಆನಂದಮೂರ್ತಿಯವರ 'ಕಾಲ್ ಮೀ ಥೀಫ್' ಕತೆ ಕಣ್ಣಿಗೆ ಕಟ್ಟುವಂತಿದೆ. ಕತೆಯಲ್ಲಿ ನಶಿಸಿ ಹೋಗುತ್ತಿರುವ ಕುಳುವ ಭಾಷೆಯನ್ನು ಅಚ್ಚುಕಟ್ಟಾಗಿ ಬಳಸಿದ್ದಾರೆ. ಈ ಭಾಷೆ ಇನ್ನೂ ಇದೆ ಎಂದು ತೋರಿಸಿಕೊಟ್ಟಿದ್ದಾರೆ.

**ಮುನಿರಾಜು ಕುಳುವ, ಬೆಂಗಳೂರು**

- ನಾಂದಿಪದ 'ಕತೆಯೇ ಭಾಷೆ' ಇಷ್ಟವಾಯಿತು. ಹೊಸ ಬರಹಗಾರರಿಗೆ ಉಪಯುಕ್ತ ಅಂಶಗಳಿವೆ. 'ನವಿಲುಗರಿ' ಅಂಕಣದಲ್ಲಿ ಪ್ರಕಟವಾದ ಪಾರ್ವತಮ್ಮ ಮುತ್ತುರಾಜು ಅವರ ಬರಹ 'ರಾಜಕುಮಾರ ಮಗುವಿನ ಮನಸು...' ಹೃದಯಸ್ಪರ್ಶಿ. ಟಿ.ಎಂ. ರಮೇಶ ಅವರ 'ಜಾರು' ಹಾಗೂ ಎನ್. ಮಧುಸೂದನ ಅವರ 'ಗಡಿಯಾರದಂಗಡಿ' ವಿಶಿಷ್ಟ ಕತೆಗಳು.

**ಎನ್. ಮಹದೇವ, ಚೆನ್ನೈ**

- ರಾಜಕುಮಾರ್ ಅವರ ಬದುಕಿನ ಮಹತ್ವದ ಕ್ಷಣಗಳನ್ನು ಪಾರ್ವತಮ್ಮ ಅವರ ಮಾತಿನಲ್ಲೇ ತೆರೆದಿಟ್ಟ ಬರಹ ಸಂಗ್ರಹಯೋಗ್ಯವಾಗಿದೆ.

**ಭಾಗ್ಯಾ, ಗುಳೇದಗುಡ್ಡ**

- ಭಾವಗೀತೆಯಂತೆ ತೋರುವ ಬಾಲಕೃಷ್ಣ ದೇವನಮನೆ ಅವರ ಕವಿತೆ 'ಮಾಗಿ ತಂದ ನೆನಪು' ಚೇತೋಹಾರಿಯಾಗಿದೆ.

**ರಾಜಶೇಖರ ಎಚ್.ಎಂ., ಹಾಸನ**




- ಕತೆ, ಕವನ, ಲೇಖನ, ಪ್ರಬಂಧ, ಸಂದರ್ಶನಗಳಂತಹ ವೈವಿಧ್ಯಮಯ ಬರಹಗಳನ್ನು ಹೊತ್ತು ಬಂದ ಸಮೃದ್ಧ ಸಂಚಿಕೆ ಖುಷಿ ಕೊಟ್ಟಿತು. ಲೇಖಕರಾದ ಕೆ.ಜಿ. ನಾಗರಾಜಪ್ಪ ಹಾಗೂ ಬಿ.ಟಿ. ಜಾಹ್ನವಿ ಅವರ ಸಂದರ್ಶನಗಳು ಸೊಗಸಾಗಿವೆ.

**ಭಾರತೀ ಬಿ. ಕುಲಕರ್ಣಿ, ಧಾರವಾಡ**

- ಯಾರಲ್ಲೂ ಕೈಚಾಚದ ಬಡ ಸ್ವಾಭಿಮಾನಿ ರೀಟಾ, ಹಣದಾಸೆಯಿಂದ ಬ್ಯಾಂಕ್ ಡಾಟಾ ನೀಡಿದ ರಂಜಿತ್ ಸುತ್ತ ಹೆಣೆದ ನಾಗ ಎಚ್. ಹುಬ್ಳಿ ಅವರ 'ಓಡಿ ಬಂದವಳು' ಕತೆ ನೀತಿಕತೆಯಂತಿದೆ.

**ಪಿ. ಜಯವಂತ ಪೈ, ಕುಂದಾಪುರ**

**ತಿದ್ದುಪಡಿ**

ಏಪ್ರಿಲ್, 2019ರ ಸಂಚಿಕೆಯ 'ಸ್ಮೃತಿಬಿಂಬ' ಅಂಕಣದ ಅಡಿಟಿಪ್ಪಣಿಯಲ್ಲಿ ಪ್ರಕಟವಾದ ರಾಜ್ಯಪಾಲ ಧರ್ಮವೀರ್ ಅವರು ಕಾದಂಬರಿಕಾರ ಅ.ನ.ಕೃ ಅವರ ಆರೋಗ್ಯ ವಿಚಾರಿಸಿದ ವರ್ಷ 1972 ಎಂದಾಗಿದೆ. ಅದರ ಸರಿಯಾದ ವರ್ಷ 1971.

–ಸಂ